# ಸ್ವಯಂ ಕಲಿಕೆಯಿಂದ ಬೆಳೆದಿದ್ದೇನೆ

**ವಿರಾಟ್ ವತ್ಸಲ್ ಉದಯದ 'ರಾಧಿಕಾ'ದ ಚಿರಂತ್**



◆ **ಚಿರಂತ್ ಪಾತ್ರದ ಮಹತ್ವದ ಬಗ್ಗೆ ಏನು ಹೇಳುತ್ತೀರಿ?**

ಇದು ಹೊಸ ಅನುಭವ. ಪಾತ್ರ ಚೆನ್ನಾಗಿದ್ದು ಅದರ ಬೆಳವಣಿಗೆ ಸೇರಿದಂತೆ ಕಥೆಗೂ ಮಹತ್ವವನ್ನು ನೀಡಿದ್ದಾರೆ. ಈಗಾಗಲೇ 800ಕ್ಕೂ ಹೆಚ್ಚು ಕಂತುಗಳನ್ನು ಪೂರೈಸಿದ್ದರೂ ಹೊಸತನವನ್ನು ಕಾಪಿಟ್ಟುಕೊಂಡಿದೆ. ಈಗಲೂ ಆರಂಭದ ದಿನಗಳ ಸಂಭ್ರಮವನ್ನು ನಾನು ಕಂಡಿದ್ದೇನೆ. ಇತ್ತೀಚೆಗೆ ರಾಧಿಕಾ ಹಾಗೂ ನನ್ನ ಮದುವೆ ನಡೆಯಿತು. ಅದ್ದೂರಿಯಿಂದ ಅದನ್ನು ನೆರವೇರಿಸಿದ್ದಲ್ಲದೆ, ಸೊಗಸಾಗಿ ಚಿತ್ರೀಕರಿಸಿದ್ದಾರೆ.

◆ **ಡಾನ್ಸ್‌ನಿಂದ ನಟನೆಗೆ ಜಿಗಿದಿದ್ದು ಹೇಗೆ?**

ಮೂಲತಃ ದಾವಣಗೆರೆಯವನು ನಾನು. ಡಾನ್ಸ್ ಕೊರಿಯೊಗ್ರಾಫರ್ ಆಗಿದ್ದೆ. ಬಣ್ಣದ ಮತ್ತೊಂದು ರೂಪ ಡಾನ್ಸ್ ಎಂದು ಭಾವಿಸಿದ್ದೇನೆ. ಅದನ್ನೇ ವೃತ್ತಿ ಎಂದು ತೆಗೆದುಕೊಂಡೆ. ನನ್ನ ಹವ್ಯಾಸ ಆ ಮಟ್ಟಿಗೆ ತೆಗೆದುಕೊಂಡು ಹೋಯಿತು. ಡಾನ್ಸ್ ಶಾಲೆಯನ್ನು ಆರಂಭಿಸಿದೆ. ಏಳೆಂಟು ವರ್ಷ ತುಂಬ ಚೆನ್ನಾಗಿ ನಡೆಯಿತು. ಅದರ ಜೊತೆ ಹೋಟೆಲ್ ಕೂಡ ನಡೆಸುತ್ತಿದ್ದೆ. ಕೋವಿಡ್ ಸಂದರ್ಭದಲ್ಲಿ ಚೇತರಿಸಿಕೊಳ್ಳಲು ಆಗದಷ್ಟು ಆರ್ಥಿಕ ಪೆಟ್ಟು ಬಿದ್ದಿದ್ದರಿಂದ ನನ್ನೆಲ್ಲ ಕೆಲಸಗಳನ್ನು ಅಲ್ಲಿಗೇ ನಿಲ್ಲಿಸಿದೆ. ಅದೇ ಸಮಯದಲ್ಲಿ 'ಸಂಘರ್ಷ'ದಲ್ಲಿ ಅವಕಾಶ ಸಿಕ್ಕಿತು. ಅದರ ಬೆನ್ನಿಗೆ 'ನನ್ನ ದೇವ್ರು'ನಲ್ಲಿಯೂ ಮಾಡಿದೆ. ಅದಾದ ಮೇಲೆ 'ರಾಧಿಕಾ' ಹೀಗೆ ಒಂದಾದ ಮೇಲೆ ಒಂದರಂತೆ ಧಾರಾವಾಹಿಗಳು ಸಿಕ್ಕಿವೆ. ನನಗೆ ಸೀರಿಯಲ್ ಟಚ್ ಇರಲಿಲ್ಲ. ಆದರೆ ಬಣ್ಣದ ಒಲವು ಇತ್ತು. ಒಳ್ಳೆಯ ಸಮಯದಲ್ಲಿ ಇದು ನನ್ನನ್ನು ಕೈ ಹಿಡಿದಿದೆ.

◆ **ಇದೆಲ್ಲ ಸಾಧ್ಯ ಆಗಿದ್ದು ಹೇಗೆ?**

ನನ್ನ ಚಿಕ್ಕಮ್ಮ–ಅಮ್ಮ ವೃತ್ತಿ ರಂಗಭೂಮಿಯಲ್ಲಿ ಇದ್ದರು. ಬಾಲ್ಯದಲ್ಲಿ ತುಂಬ ಒರಟನಾಗಿದ್ದೆ ಎಂದು ಅಮ್ಮ ನನ್ನನ್ನು ಆಶ್ರಮದ ವಸತಿ ಶಾಲೆಗೆ ಹಾಕಿದರು. ಪ್ರೌಢಶಾಲೆಗೆ ಅಲ್ಲಿಂದ ಮತ್ತೆ ದಾವಣಗೆರೆಗೆ ಬಂದು ಸೇರಿದೆ. ಅಷ್ಟರಲ್ಲಾಗಲೇ ಸಾಂಸ್ಕೃತಿಕ ಕಾರ್ಯಕ್ರಮಗಳಿಂದ ಶಾಲೆಯಲ್ಲಿ ಫೇಮಸ್ ಆಗಿದ್ದೆ. ನಂತರ ಡಿಪ್ಲೊಮಾ ಸೇರಿದವನು ಅದನ್ನು ಅರ್ಧಕ್ಕೆ ನಿಲ್ಲಿಸಿ ಡಾನ್ಸ್ ಆರಂಭಿಸಿದೆ. ನಂತರ ಪಿಯು ಮುಗಿಸಿ ಡಿಗ್ರಿಗೆ ಸೇರಿದೆ. ಆಗ ಕಸ್ತೂರಿ ಟೀವಿಯಲ್ಲಿ ನಡೆಸುತ್ತಿದ್ದ ಡಾನ್ಸ್ ರಿಯಾಲಿಟಿ ಶೋಗೆ ಆಯ್ಕೆಯಾದೆ. ಅದರಲ್ಲಿ ಫೈನಲ್ ಹಂತದವರೆಗೂ ಪೈಪೋಟಿಯನ್ನು ಒಡ್ಡಿ ರನ್ನರ್ ಅಪ್ ಆದೆ. ಮತ್ತೊಂದು ರಿಯಾಲಿಟಿ ಶೋನಲ್ಲಿ ಸ್ಪರ್ಧಿಸಬೇಕು ಎನ್ನುವ ಹಂತದಲ್ಲಿಯೇ ನನಗೆ ಅಭಿನಯಕ್ಕೆ ಅವಕಾಶ ಸಿಕ್ಕಿದ್ದರಿಂದ ಈ ಕಡೆ ಪ್ರವೇಶ ಮಾಡಿದಂತೆ ಆಯಿತು.

◆ **ಸಿನಿಮಾದ ಬಗ್ಗೆ ನಿಮ್ಮ ನಿಲುವೇನು?**

ಸಿನಿಮಾಕ್ಕೆ ಮಾತುಕತೆ ನಡೀತಾ ಇದೆ. ಅದು ಖಚಿತ ಆಗುವ ತನಕ ಹೇಳಲು ಇಷ್ಟ ಇಲ್ಲ. ಸಿನಿಮಾದಲ್ಲಿ ನಟಿಸಲೇಬೇಕು ಎನ್ನುವುದು ನನ್ನ ಅಂತಿಮ ಗುರಿ. ಅಲ್ಲೂ ಒಳ್ಳೆಯ ಹೆಸರನ್ನು ಗಳಿಸಬೇಕು. ಅದಕ್ಕಾಗಿ ಎಷ್ಟೇ ಶ್ರಮವಹಿಸಿ ಕೆಲಸ ಮಾಡಲು ಸಿದ್ಧ. ಬಣ್ಣದ ಜಗತ್ತಿನಲ್ಲಿಯೇ ಬದುಕನ್ನು ಸಾಗಿಸಬೇಕು. ನನಗೆ ಜೀವನ ಕೊಟ್ಟ ಕಿರುತೆರೆಯನ್ನು ಯಾವತ್ತೂ ಮರೆಯುವುದಿಲ್ಲ. ಆ ನಂಟು ಇಟ್ಟುಕೊಂಡೇ ದೊಡ್ಡದಾಗಿ ಬೆಳೆಯಬೇಕು.

◆ **ಕೊರಿಯೊಗ್ರಫಿ ಕಲಿತಿದ್ದು ಎಲ್ಲಿ?**

ಚಿಕ್ಕವನಿದ್ದಾಗಲೇ ಡಾನ್ಸ್ ಮಾಡಲು ಶುರು ಮಾಡಿದೆ. ಒಂದು ಹಂತಕ್ಕೆ ಬೆಳೆದ ಮೇಲೆ ವೃತ್ತಿಪರ ಡಾನ್ಸ್ ತಂಡವನ್ನೇ ಕಟ್ಟಿಕೊಂಡೆವು. ನನ್ನ ಹಿರಿಯ ಒಡನಾಡಿ 'ಸ್ಟೇಪ್' ಎಂಬ ಡಾನ್ಸ್ ತರಬೇತಿ ಕೇಂದ್ರ ನಡೆಸುತ್ತಿದ್ದರು. ಆ ತಂಡದ ಮೂಲಕ ಒಂದು ಶೋ ಮಾಡಿದವನು ಅದರ ಭಾಗವಾದೆ. ಅಲ್ಲೇ ತರಗತಿಯನ್ನು ಆರಂಭಿಸಿದೆವು. ಜಿಲ್ಲೆಯಾದ್ಯಂತ ವಿದ್ಯಾರ್ಥಿಗಳು ಬಂದರು. ಇದು ಯಾವುದನ್ನು ನಾನು ಕಲಿತು ಮಾಡಿಲ್ಲ. ಆಸಕ್ತಿಯಿಂದ ಸ್ವಯಂ ಕಲಿಕೆಯಿಂದ ರೂಢಿಸಿಕೊಂಡೆ. ಇದರ ಜೊತೆ ಇವೆಂಟ್ ನಿರ್ವಹಣೆ ಮಾಡಿದೆವು. ಮಾತ್ರವಲ್ಲದೆ ಕಾರ್ಯಕ್ರಮಗಳನ್ನು ಸಂಘಟಿಸಲೂ ಶುರುಮಾಡಿದೆವು. ಒಂದೆರಡು ದೊಡ್ಡ ಕಾರ್ಯಕ್ರಮಗಳನ್ನು ರೂಪಿಸಿದೆವು.

◆ **ಹೊಸ ನಟ–ನಟಿಯರಿಗೆ ಏನು ಹೇಳಲು ಬಯಸುತ್ತೀರಿ?**

ನನಗೆ ಆದ ಅನುಭವದಲ್ಲಿ ಹೇಳುವುದಾದರೆ, ಇಲ್ಲಿಗೆ ಬಂದ ಮೇಲೆ ಇದು ಬಿಟ್ಟರೆ ಬೇರೆ ಬದುಕೇ ಇಲ್ಲ ಎನ್ನುವ ಮಟ್ಟಿಗೆ ನಿರ್ಧಾರ ತೆಗೆದುಕೊಳ್ಳಬಾರದು. ಜೀವನದಲ್ಲಿ ಇದೂ ಒಂದು. ಯಾರೋ ಒಬ್ಬ ಹೀರೊ ಆಗಲೇಬೇಕು ಎಂದು ಹಟ ಹಿಡಿದು ಬರುತ್ತಾನೆ. ಒಂದು ವೇಳೆ ಆಗದಿದ್ದರೆ, ತಾನು ಬದುಕಿದ್ದೇ ವೇಸ್ಟ್ ಎಂದು ಯೋಚಿಸುತ್ತಾನೆ. ಇಂತಹ ಮನಸ್ಥಿತಿಯವರು ಈ ಕ್ಷೇತ್ರಕ್ಕೆ ಬರಲೇಬಾರದು. ಈ ಜಗತ್ತಿನಲ್ಲಿ ಸಾಕಷ್ಟು ಅಡೆತಡೆಗಳಿವೆ. ಅವೆಲ್ಲವನ್ನೂ ಎದುರಿಸಬೇಕು ಮುನ್ನಡೆಯಬೇಕು. ನಮ್ಮದೇ ಆದ ಒಂದು ಜೀವನ ಇರುತ್ತದೆ. ನಮ್ಮದೇ ಆದ ಕರ್ತವ್ಯಗಳೂ ಇರುತ್ತವೆ. ಇದರ ಜೊತೆ ಬೇರೆ ಬೇರೆ ಪ್ರಯತ್ನಗಳನ್ನೂ ಮಾಡಬೇಕು. ನಮ್ಮ ಪ್ರಯತ್ನಕ್ಕೆ ಪ್ರತಿಫಲ ಸಿಗುವುದು ತಡ ಆಗುತ್ತಿದೆ ಎಂದು ಸಾಕಷ್ಟು ಮಂದಿ ತಮ್ಮ ಜೀವನವನ್ನು ಹಾಳು ಮಾಡಿಕೊಂಡಿದ್ದಾರೆ ಹಾಗಾಗಬಾರದು.

■ **ರಾಘವೇಂದ್ರ ಕೆ.**